



ಅರುಣ ಪಿ. ಭಟ್ಟ

# ವಾರ ಭವಿಷ್ಯ 12.05.2022ರಿಂದ 18.05.2022ರವರೆಗೆ




ಕಾನೂನು ವ್ಯಾಜ್ಯಗಳಿದ್ದಲ್ಲಿ ಅದನ್ನು ನಿವಾರಿಸಿಕೊಳ್ಳಲು ಸೂಕ್ತ ವೇದಿಕೆ ದೊರೆಯಲಿದೆ. ಸರ್ಕಾರಿ ಹಾಗೂ ಖಾಸಗಿ ಕೆಲಸ ಕಾರ್ಯಗಳಲ್ಲಿ ಪ್ರಗತಿ ಇದೆ. ಪ್ರೀತಿ ಪಾತ್ರರ ಜತೆಗೆ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಲಿದೆ. ಸಹೋದ್ಯೋಗಿಗಳ ಜತೆ ಉತ್ತಮ ಬಾಂಧವ್ಯ ಇರುತ್ತದೆ. ವೈಯಕ್ತಿಕ ಸಂಬಂಧದಲ್ಲಿ ಏರಿಳಿತಗಳಿರುತ್ತವೆ. ಯಾರ ಬಗ್ಗೆಯೂ ಕಟುವಾದ ಶಬ್ದ ಬಳಕೆ ಮಾಡಬೇಡಿ. ಶುಭದಿನ 13. ಸೌಂದರ್ಯ ಲಹರಿ ಪಠಿಸಿರಿ.

---

ವಾರದ ಶುರುವಿನಲ್ಲಿ ವೈವಾಹಿಕ ಜೀವನ ಸಂತೋಷವಾಗಿರುತ್ತದೆ. ಸಂಗಾತಿ ಜತೆ ಮನಸ್ತಾಪ ಇದ್ದಲ್ಲಿ ನಿವಾರಣೆ ಆಗುತ್ತದೆ. ವ್ಯವಹಾರಗಳನ್ನು ಮುನ್ನಡೆಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸಲಿದ್ದೀರಿ. ಪ್ರೀತಿಪಾತ್ರರ ಜತೆ ಬಾಂಧವ್ಯ ಗಟ್ಟಿಯಾಗಲಿದೆ. ಆರೋಗ್ಯ ಉತ್ತಮವಾಗಿರುತ್ತದೆ. ಈ ಸಮಯದಲ್ಲಿ ಎಚ್ಚರಿಕೆಯಿಂದ ಇರಬೇಕು. ಶುಭದಿನ 15. ಹನುಮಾನ್ ಚಾಲಿಸ್ ಪಠಿಸಿರಿ.




---




ಶೈಕ್ಷಣಿಕ ಹಾಗೂ ವೃತ್ತಿರಂಗದಲ್ಲಿ ಹಲವು ಮಹತ್ತರವಾದ ಅವಕಾಶಗಳು ದೊರಕುತ್ತದೆ. ವಾರದ ಮೊದಲ ಭಾಗದಲ್ಲಿ ಆದಾಯವು ಸಮಾಧಾನಕರ ಮಟ್ಟಕ್ಕೆ ಏರಿಕೆ ಆಗಲಿದೆ. ಪ್ರೀತಿಪಾತ್ರರ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಈ ಹಿಂದಿನ ಕೌಟುಂಬಿಕ ಸಮಸ್ಯೆಗಳನ್ನು ತಾಳ್ಮೆಯಿಂದ ಬಗೆಹರಿಸಿಕೊಳ್ಳಲಿದ್ದೀರಿ. ಪ್ರತಿಸ್ಪರ್ಧಿಗಳನ್ನು ಮಣಿಸಲು ಅವಕಾಶ ದೊರೆಯಲಿದೆ. ಶುಭದಿನ 13. ಚಂಡಿ ಪಾರಾಯಣ ಮಾಡಿರಿ.

---

ವ್ಯಾಪಾರಸ್ಥರು ಅತ್ಯುತ್ತಮ ಫಲಿತಾಂಶ ಪಡೆಯಲಿದ್ದಾರೆ. ಕಚೇರಿಯ ಕೆಲಸಕ್ಕೆ ಹಣ ಖರ್ಚು ಮಾಡಲಿದ್ದೀರಿ. ಆರೋಗ್ಯ ದೃಢತೆ ಚೆನ್ನಾಗಿರಲಿದೆ. ವೃತ್ತಿಪರ ಕೌಶಲವನ್ನು ಹೆಚ್ಚಿಸಿಕೊಳ್ಳಲು ಅವಕಾಶ ದೊರೆಯಲಿದೆ. ಆದರೆ ಅದಕ್ಕೆ ನೀವು ಹೆಚ್ಚಿನ ಶ್ರಮ ಹಾಕಬೇಕಾಗುತ್ತದೆ. ನಿಮ್ಮ ಸಂಗಾತಿ ನಿಮ್ಮ ಬಗ್ಗೆ ಅಸಮಾಧಾನ ಹೊಂದಿದ್ದಲ್ಲಿ ಮನವೊಲಿಸಲು ಸಫಲರಾಗುತ್ತೀರಿ. ಶುಭದಿನ 12. ಶ್ರೀರಾಮ ರಕ್ಷಾ ಸ್ತೋತ್ರ ಪಠಿಸಿರಿ.




---




ಆರೋಗ್ಯ ಉತ್ತಮವಾಗಿ ಇರಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಆರಂಭಿಸಲಿದ್ದೀರಿ. ಹಲವು ಸಕಾರಾತ್ಮಕ ಬದಲಾವಣೆಗೆ ಸಾಕ್ಷಿ ಆಗಲಿದ್ದೀರಿ. ನಿರ್ಮಾಣ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಏಳ್ಗೆ ಇದೆ. ದಾನ ಧರ್ಮ ಕಾರ್ಯಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ವಾರದ ಮಧ್ಯದಲ್ಲಿ ಮನೆಗೆ ಅಗತ್ಯ ಇರುವ ವಸ್ತುಗಳನ್ನು ಖರೀದಿ ಮಾಡುವ ಸಾಧ್ಯತೆಗಳಿವೆ. ಶುಭದಿನ 16. ಗಣಪತಿ, ಸುಬ್ರಮಣ್ಯ ಜಪ ಮಾಡಿರಿ.

---

ವಾರದ ಶುರುವಿನಿಂದಲೇ ಸಂಬಂಧಿಗಳೊಂದಿಗೆ ಬಾಂಧವ್ಯ ಗಟ್ಟಿಯಾಗಲಿದೆ. ಕುಟುಂಬದಲ್ಲಿ ಸಂತಸದ ವಾತಾವರಣ ಇರಲಿದೆ. ಆದರೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಕೆಲ ಸಮಸ್ಯೆ ಕಾಣಿಸಿಕೊಳ್ಳಬಹುದು. ವ್ಯವಹಾರಗಳಲ್ಲಿ ದೊಡ್ಡ ಮಟ್ಟದ ಲಾಭ ದೊರೆಯುವ ಅವಕಾಶಗಳಿವೆ. ವಾರದ ಮಧ್ಯ ಭಾಗದಲ್ಲಿ ಅದೃಷ್ಟದ ಬೆಂಬಲ ಇರುತ್ತದೆ. ಶುಭದಿನ 18. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




---




ವ್ಯಾಪಾರ– ಉದ್ಯಮ ವಿಸ್ತರಣೆಗೆ ಕೈಗೊಂಡ ಪ್ರಯತ್ನಗಳಲ್ಲಿ ಯಶಸ್ವಿ ಆಗಲಿದ್ದೀರಿ. ಆರೋಗ್ಯ ಉತ್ತಮವಾಗಿರುತ್ತದೆ. ಈ ಹಿಂದಿನ ಆರೋಗ್ಯ ಸಮಸ್ಯೆಗಳು ಇದ್ದಲ್ಲಿ ನಿವಾರಣೆ ಆಗಲಿದೆ. ವಾರದ ದ್ವಿತೀಯಾರ್ಧದಲ್ಲಿ ಹಲವು ಕೆಲಸಗಳನ್ನು ಅಂದುಕೊಂಡಂತೆಯೇ ಪೂರ್ಣಗೊಳಿಸಲು ತಂತ್ರಗಳನ್ನು ರೂಪಿಸಲಿದ್ದೀರಿ. ಹಲವು ಅನುಕೂಲಕರ ಸನ್ನಿವೇಶ ಸೃಷ್ಟಿಯಾಗಲಿದೆ. ಶುಭದಿನ 12. ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.

---

ವಿದೇಶಗಳಲ್ಲಿ ಕಾರ್ಯ ನಿರ್ವಹಿಸಲು ಬಯಸಿದವರಿಗೆ ಶುಭ ವಾರ್ತೆ. ಆರ್ಥಿಕ ಹೂಡಿಕೆಗಳಿಗೆ ಉತ್ತಮ ಫಲಿತಾಂಶ ದೊರೆಯಲಿದೆ. ನಿಮ್ಮ ಪ್ರತಿಸ್ಪರ್ಧಿಗಳ ವಿರುದ್ಧ ಕೈ ಮೇಲಾಗಲಿದೆ. ಆದರೆ ಆರೋಗ್ಯ ಮತ್ತು ಪ್ರೀತಿ ಪ್ರೇಮದ ವಿಚಾರದಲ್ಲಿ ಏರಿಳಿತಗಳನ್ನು ಕಾಣಲಿದ್ದೀರಿ. ಸಂಗಾತಿಯಿಂದ ನಿರೀಕ್ಷೆ ಮಾಡಿದಂಥ ಬೆಂಬಲ ನಿಮಗೆ ದೊರೆಯುವುದಿಲ್ಲ. ಶುಭದಿನ 16. ಚಂಡಿ ಪಾರಾಯಣ ಮಾಡಿರಿ.




---




ಕೌಟುಂಬಿಕ ಜೀವನ ಚೆನ್ನಾಗಿ ಇರಬೇಕು ಎಂಬ ಕಾರಣಕ್ಕೆ ನೀವು ಹೆಚ್ಚು ಶ್ರಮ ಹಾಕಲಿದ್ದೀರಿ. ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ. ಸಂಗಾತಿ ಜತೆಗಿನ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ವ್ಯಾಪಾರ ವ್ಯವಹಾರಗಳು ಇದ್ದಲ್ಲಿ ಏಳ್ಗೆ ಕಾಣಿಸುವ ಸೂಚನೆ ದೊರೆಯುತ್ತದೆ. ಆರೋಗ್ಯ ಸ್ಥಿತಿ ಉತ್ತಮವಾಗಿ ಇರಲಿಕ್ಕಿಲ್ಲ. ಸಂಗಾತಿ ಜತೆಗೆ ಉತ್ತಮ ಮಾತಿನ ಮೇಲೆ ನಿಗಾ ಇರಲಿ. ಶುಭದಿನ 14. ರಾಘವೇಂದ್ರ ಸ್ವಾಮಿಗಳ ಭಜನೆ ಮಾಡಿರಿ.

---

ಆರೋಗ್ಯ ಸಮಸ್ಯೆಗಳು ನಿವಾರಣೆ ಆಗುತ್ತವೆ. ವೃತ್ತಿ ಬದುಕಿನ ನಿಮ್ಮ ಅನುಭವವನ್ನು ಸಹೋದ್ಯೋಗಿಗಳು ಮನಸಾರೆ ಹೊಗಳಲಿದ್ದಾರೆ. ವಾರದ ದ್ವಿತೀಯಾರ್ಧದಲ್ಲಿ ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ. ಜೀವನಶೈಲಿಯಲ್ಲಿ ಸಕಾರಾತ್ಮಕವಾದ ಬದಲಾವಣೆ ಕಾಣಲಿದ್ದೀರಿ. ವಾರಾಂತ್ಯಕ್ಕೆ ವೃತ್ತಿ ಬದುಕಿನಲ್ಲಿ ಅಂದುಕೊಂಡ ಗುರಿಯನ್ನು ತಲುಪುವುದು ಕಷ್ಟವಾಗಲಿದೆ. ಶುಭದಿನ 15. ಕಾಲಭೈರವನ ಸೇವೆ ಮಾಡಿರಿ.




---




ಈ ವಾರ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಕೊಳ್ಳಲಿದ್ದೀರಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ನಿಮ್ಮ ಜ್ಞಾನವನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಅಗತ್ಯವಾದ ಪ್ರಯತ್ನಗಳನ್ನು ಮಾಡಲಿದ್ದೀರಿ. ವಾರದ ದ್ವಿತೀಯಾರ್ಧದಲ್ಲಿ ವೃತ್ತಿ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ಮಾಡಿಕೊಳ್ಳಲಿದ್ದೀರಿ. ಸಹೋದ್ಯೋಗಿಗಳು ಅಗತ್ಯವಾದ ಬೆಂಬಲ, ಪ್ರೋತ್ಸಾಹ ನೀಡಲಿದ್ದೀರಿ. ಶುಭದಿನ 16. ವಿಷ್ಣು ಸಹಸ್ರನಾಮ ಓದಿರಿ.

---

ವಾರದ ಶುರುವಿನಿಂದಲೇ ಅಂದುಕೊಂಡ ಫಲಿತಾಂಶ ನಿಮಗೆ ದೊರೆಯಲಿದೆ. ದೂರದ ಸ್ಥಳದಿಂದ ಶುಭ ವಾರ್ತೆ ಕೇಳಲಿದ್ದೀರಿ. ಹಣಕಾಸು ಹೂಡಿಕೆಯಿಂದ ಉತ್ತಮ ಲಾಭವಾಗಲಿದೆ. ಋತುಮಾನಕ್ಕೆ ತಕ್ಕ ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ವೃತ್ತಿ ಬದುಕನ್ನು ಆರಂಭ ಮಾಡಬೇಕಿರುವವರಿಗೆ ಉತ್ತಮ ಅವಕಾಶ ದೊರೆಯಲಿದೆ. ಶುಭದಿನ 18. ಶಿವಕವಚ ಪಠಿಸಿರಿ.

